# ಬಣ್ಣವೂ ಮುಜುಗರದ ಲೋಕವೂ...

## ಸಂಗೀತಾ
### ಸ್ಟಾರ್ ಸುವರ್ಣದ 'ಇಂತಿ ನಿಮ್ಮ ಆಶಾ'ದ ಆಶಾ

◆ **ಬಣ್ಣದ ಲೋಕದ ದೀರ್ಘ ಪಯಣ ಹೇಗಿತ್ತು?**

ಒಳ್ಳೆಯ ಅನುಭವವೇ ನನಗೆ ಸಿಕ್ಕಿದೆ. ನನ್ನ ವೃತ್ತಿ ನನಗೆ ಅಪಾರ ಖುಷಿಯನ್ನು ಕಲ್ಪಿಸಿದೆ. ಇಲ್ಲಿ ಅಮ್ಮ, ತಂಗಿ, ನಾಯಕಿ, ಪೋಷಕಿಯಾಗಿ ಹತ್ತಾರು ಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಇನ್ನೇನೂ... ಎನ್ನುವಷ್ಟರಲ್ಲಿ ಮತ್ತೆ ನಾಯಕಿಯಾಗಿ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಕಲಾವಿದೆಯಾಗಿ ಇಂತಹದ್ದೇ ಮಾಡಬೇಕು ಎನ್ನುವ ಆಸೆ ಕೂಡ ಇರುತ್ತದೆ. ಈಗ ಸಿಕ್ಕಿರುವ ಆಶಾ ಅಂತಹ ಪಾತ್ರ. ಈಕೆ ಎಲ್ಲರಿಗೂ ಇಷ್ಟ ಆಗುತ್ತಾಳೆ. ಯಾವುದೇ ಒಬ್ಬ ವೀಕ್ಷಕಿ ಓಹೋ ನನ್ನನೇ ನಾನು ನೋಡಿದಂತೆ ಆಗುತ್ತಿದೆ ಎನ್ನುವ ಅನುಭವವನ್ನು ಇದು ನೀಡುತ್ತದೆ. ಅವರಿಗೆ ನನ್ನ ಬಗ್ಗೇನೇ ಹೇಳುತ್ತಿದ್ದಾರೆ ಎನ್ನುವ ಭಾವ ಮೂಡುವಷ್ಟು ಸಹಜವಾಗಿ ಕತೆ ನಿರೂಪಣೆಯಾಗಿದೆ. ಎಲ್ಲರ ಮನೆಯಲ್ಲೂ ಕಾಣುವಂತಹ ಪಾತ್ರ. ನಮ್ಮ ಕೆಲಸದಿಂದ ತೃಪ್ತಿ ಅನ್ನೋದು ಸಿಗಬೇಕು ಅಲ್ಲವಾ? ಅಂತಹ ಪಾತ್ರ ಸಿಕ್ಕಿದೆ. ತುಂಬ ತೃಪ್ತಿಯಿಂದ ಆಶಾ ಆಗಿದ್ದೇನೆ.

◆ **ಹಿರಿಯರನ್ನು ಹಿನ್ನೆಲೆಗೆ ಸರಿಸಿ, ಹೊಸಬರನ್ನೇ ಹುಡುಕುವ ಹೊತ್ತಿನಲ್ಲಿ ಹಿರಿಯ ನಟಿಗೆ ನಾಯಕಿಯ ಮನ್ನಣೆ ಅಪರೂಪ ಅನ್ನಿಸುವುದಿಲ್ಲವೆ?**

ಖಂಡಿತವಾಗಿಯೂ ನಿಜ. ನಾನೂ ಒಮ್ಮೆ ಹೊಸಬಳಾಗಿಯೇ ಪ್ರವೇಶ ಮಾಡಿದ್ದೆ ನಿಜ. ಹೊಸಬರ ನಡುವೆ ಅನುಭವಿಗಳನ್ನ ಹಿರಿಯರನ್ನು ಹಿನ್ನೆಲೆಗೆ ಸರಿಸುವುದು ಚೆನ್ನಾಗಿರಲ್ಲ. ಇದೊಂದು ವೃತ್ತ, ಸುತ್ತುತ್ತಿರುತ್ತದೆ. ಅಲ್ಲಿ ಹೊಸಬರೂ ಬರಬೇಕು. ಹಿರಿಯರಿಗೂ ಪ್ರಾಮುಖ್ಯತೆ ಸಿಗಬೇಕು. ನಮ್ಮ ಮನೆಗಳಲ್ಲಿಯೂ ಹಿರಿಯರು ಕಡೆಗಣನೆಗೆ ತುತ್ತಾಗುವ ಸಾಧ್ಯತೆ ಹೆಚ್ಚಿದೆ. ಅವರಿಗೂ ಆಸೆಗಳಿರುತ್ತವೆ. ಅವರದೇ ಆದ ಬಯಕೆಗಳು ಇರುತ್ತವೆ ಎನ್ನುವ ಜೈವಿಕ ಸತ್ಯವನ್ನು ಅರ್ಥ ಮಾಡಿಕೊಳ್ಳುವ ಹೊತ್ತಿಗೆ ಸಮಯ ಹೆಚ್ಚಾಗಿರುತ್ತದೆ.

◆ **ನಟಿಯಾಗಿ ನೀವು ಕಂಡುಕೊಂಡ ಸತ್ಯಗಳು ಏನು?**

ಕೆಲವೊಮ್ಮೆ ಸತ್ಯಗಳು ಹೇಳಲು ಆಗದಷ್ಟು ಸಂಕೀರ್ಣವಾಗಿರುತ್ತವೆ. ಏಕೆಂದರೆ ನಾವು ಸಾಕಷ್ಟು ಮುಜುಗರವನ್ನು ಎದುರಿಸುತ್ತೇವೆ. ಅದೆಲ್ಲವನ್ನೂ ಹೇಳಿಕೊಳ್ಳುವುದಿಲ್ಲ. ಅದನ್ನು ಹೇಳಲು ಸಾಧ್ಯ ಇರದಂತಹ ವಾತಾವರಣವೂ ಅಲ್ಲಿ ಮನೆ ಮಾಡಿರುತ್ತದೆ. ಏಕೆಂದರೆ ಅಲ್ಲಿ ನಾವು ಬದುಕಬೇಕು. ಕಿರುತೆರೆ ಇರಲಿ ಹಿರಿತೆರೆ ಇರಲಿ ಕೆಲವೊಂದು ಸಂದರ್ಭಗಳು ಇಷ್ಟ ಇಲ್ಲದಿದ್ದರೂ ಮುಖವಾಡ ಹಾಕಬೇಕಾಗುತ್ತದೆ. ಇಂತಹ ಸನ್ನಿವೇಶ ಉಸಿರುಕಟ್ಟುವ ವಾತಾವರಣ ನಿರ್ಮಾಣ ಮಾಡಿರುತ್ತದೆ. ಆದರೂ ಆ ಬಗ್ಗೆ ಏನು ಹೇಳಿರುವುದಿಲ್ಲ. ವಿರೋಧಕ್ಕೆ ಹೋದರೆ ಮಾತ್ರ ಪ್ರತಿರೋಧ ಅನಿವಾರ್ಯ ಆಗಬಹುದು. ಸುಮಾರು ಸಂದರ್ಭದಲ್ಲಿ ಉದಾಸೀನವೇ ಉತ್ತಮ ಮದ್ದು ಎಂದು ಅಂತಹ ಘಟನೆ– ವ್ಯಕ್ತಿಯನ್ನು ತಿರಸ್ಕರಿಸಿದರೆ ಅಲ್ಲಿಗೆ ಮುಗಿಯುತ್ತದೆ. ವೈಯಕ್ತಿಕವಾಗಿ ಹೇಳುವಂತಹ ನೋವಿನ ಸಂಗತಿಯನ್ನು ನಾನು ಎದುರಿಸಿಲ್ಲ.

◆ **ಆಶಾಳ ಎದೆಯಾಳದ ದುಮ್ಮಾನಗಳು ಏನು?**

ಅಪ್ಪಟ ಮನೆ ಎಂಬ ಜಗತ್ತಿಗೆ ತನ್ನನ್ನು ಅರ್ಪಿಸಿಕೊಂಡಿರುವ ಗೃಹಿಣಿ. 'ಮನೆಯಲ್ಲಿ ಇರುವವಳು ಏನು ಕೆಲಸ ಮಾಡುವುದಿಲ್ಲ' ಎಂದು ಬಹುತೇಕರು ಅಂದುಕೊಳ್ಳುತ್ತಾರೆ. ವಾಸ್ತವದಲ್ಲಿ ಯಾವ ಉದ್ಯೋಗಸ್ಥಳಿಗಿಂತ ಕಡಿಮೆ ಇಲ್ಲದಂತೆ ಆಕೆ ಕೆಲಸ ಮಾಡುತ್ತಾಳೆ. ಮಕ್ಕಳ ಊಟೋಪಚಾರ, ಓದು– ಬರಹ ಎಲ್ಲದರ ಜೊತೆ ಅತ್ತೆ– ಮಾವ, ಬಂಧು– ಬಳಗವನ್ನು ನಿಭಾಯಿಸಬೇಕು. ಗೃಹಿಣಿಯರೂ ಕೂಡ ಹೊರ ಹೋಗುವವರ ಬಗ್ಗೆ ಹೆಚ್ಚು ಕಾಳಜಿ ತೆಗೆದುಕೊಳ್ಳುತ್ತಾಳೆ. ಅಂತೆಯೇ ಇಲ್ಲಿಯ ಆಶಾ ತನ್ನೆಲ್ಲಾ ಆಸೆಗಳನ್ನು ತ್ಯಾಗ ಮಾಡುವವಳು. ಅದು ವೈಯಕ್ತಿಕವಾಗಿ ನನಗೂ ಅನ್ವಯವಾಗುತ್ತದೆ. ಸ್ವತಃ ನನಗೆ ಸಂಸಾರವೇ ಜಗತ್ತು. ಅದರೊಳಗೆ ಗಂಡ ಮಕ್ಕಳು ಮಾತ್ರ ಕಾಣಿಸುತ್ತಾರೆ. ನನಗೆ ಮಗ ಫೋನ್ ಮಾಡಿದರೆ ಆಗುವ ಖುಷಿ ಅಷ್ಟಿಷ್ಟಲ್ಲ. ಪಾತ್ರದ ಮಗನಂತೆ ನನ್ನ ಮಗನೂ ಆದರೆ... ಎಷ್ಟು ಚಂದ ಎಂದು ಎಷ್ಟೋ ಸಂದರ್ಭದಲ್ಲಿ ಅನ್ನಿಸಿದೆ.

ನನ್ನ ತಲೆಯಲ್ಲಿ ಮಕ್ಕಳು ಮಾತ್ರ ತುಂಬಿರುತ್ತಾರೆ ಎಂದು ಬಹುತೇಕರಿಗೆ ಗೊತ್ತಿರುವುದಿಲ್ಲ. ಒಟ್ಟಾರೆ ಪಾತ್ರವೇ ನಾನಾಗಿದ್ದೇನೆ. ಒಳ್ಳೊಳ್ಳೆ ಪಾತ್ರ ಮಾಡಬೇಕು. ಅದು ನಮ್ಮ ಮಕ್ಕಳಿಗೂ ಖುಷಿ ಕೊಡುವಂತಿರಬೇಕು. ಮಕ್ಕಳ ಕಣ್ಣಿನಲ್ಲಿ ಪಾತ್ರವನ್ನು ನೋಡುತ್ತೇನೆ. ಆ ಮೂಲಕ ಭವಿಷ್ಯವನ್ನು ಕಾಣುತ್ತಿದ್ದೇನೆ.

◆ **ವೃತ್ತಿ ಮತ್ತು ಖಾಸಗಿ ಬದುಕಿನ ಸಾಮರಸ್ಯ ಹೇಗೆ ಸಾಧ್ಯ ಆಗುತ್ತದೆ?**

ಸಾಮರಸ್ಯ ಸಾಧಿಸುವುದು ತುಂಬಾ ಸವಾಲಿನ ಕೆಲಸ. ಸಂಸಾರದ ಎಲ್ಲ ಬೇಕು ಬೇಡಗಳನ್ನು ಪೂರೈಸಿ ನಟನೆ ಮಾಡುತ್ತೇವೆ. ಕಲಾವಿದೆಯ ಕೆಲಸ ಸುಲಭ ಅಲ್ಲ. ನೋಡುವವರ ಕಣ್ಣಿಗೆ ಆಕೆ ಆರಾಮಾಗಿದ್ದಾಳೆ. ಒಳ್ಳೊಳ್ಳೆ ಸೀರೆ ಹಾಕಿಕೊಳ್ಳುತ್ತಾರೆ. ಮೇಕಪ್ ಮಾಡಿಕೊಳ್ಳುತ್ತಾಳೆ ಎಂದು ಅನ್ನಿಸುತ್ತದೆ. ಮೇಕಪ್ ಮಾಡುವುದೇ ನಮಗೊಂದು ಕೆಲಸ ಆಗಿರುತ್ತದೆ. ಶೂಟಿಂಗ್‌ಗೆ ಬರುವ ಮುನ್ನ ಮಕ್ಕಳಿಗೆ ಅಡುಗೆ ಮಾಡಿಯೇ ಬರುತ್ತೇವೆ. ಅವರ ಇಷ್ಟದಂತೆಯೇ ಎಲ್ಲವನ್ನೂ ಹೊಂದಿಸಿಯೇ ಬರುತ್ತೇವೆ. ವೃತ್ತಿ ಮತ್ತು ಸಂಸಾರ ಎರಡನ್ನೂ ನಿಭಾಯಿಸಿಕೊಳ್ಳುವುದು ಸಾರ್ಥಕ ಬದುಕು. ಕುಟುಂಬದ ಸದಸ್ಯರಿಗೂ ತೊಂದರೆಯಾಗದಂತೆ ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ. ಅವರೂ ನನ್ನ ಸುಖ– ದುಃಖಗಳಿಗೆ ಸ್ಪಂದಿಸುತ್ತಾರೆ. ಭಗವಂತ ಅಂತಹ ಶಕ್ತಿಯನ್ನು ನೀಡಿದ್ದಾನೆ. ಮುಂದೆಯೂ ಅದು ಹಾಗೆಯೇ ಇರಲಿ ಇನ್ನೂ ಒಳ್ಳೆಯ ಪಾತ್ರಗಳನ್ನು ಮಾಡುವ ಅವಕಾಶವನ್ನು ಅವನು ನೀಡಲಿ ಎಂದು ಬೇಡುತ್ತೇನೆ. ■

